**FDP** 50/2022

**ಸಿ ಡಬ್ಲ್ಯೂ 1**

# ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಸಿಜೆಎಂ ಧಾರವಾಡ

| | | |
|---|---|---|
| ಸಾಕ್ಷಿಯ ಹೆಸರು | : | ಮಹದೇವ ಮಾದರ |
| ತಂದೆನ/ಗಂಡನ ಹೆಸರು | : | ಮಾರುತಿ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಸರ್ಕಾರಿ ಭೂಮಾಪಕರು |
| ವಾಸ | : | ಧಾರವಾಡ |

ಇಂದು ದಿನಾಂಕ 11-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ

ನಾನು ಈಗ ನೋಡುತ್ತಿರುವ ಕಮೀಷನ್ ವರದಿಯನ್ನು ನಾನೇ ತಯಾರಿಸಿ ಸಲ್ಲಿಸಿದ್ದು ಅದನ್ನು ನೋಡಿ ಗುರುತಿಸುತ್ತಿದ್ದೇನೆ. ಕಮೀಷನ್ ವರದಿಯನುನ್ನು ನಿಶಾನೆ ಸಿ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ 1 ನೇ ಎದುರುದಾರರ ಪರ ವಕೀಲರಿಂದಃ**

ನಾನು ವಾದಿ ಹಾಗೂ ಪ್ರತಿವಾದಿಯರಿಗೆ ನೋಟಿಸು ನೀಡಿದ ನಂತರ ವಾದಿಯರಿಗೆ ಪ್ರತ್ಯೇಕವಾಗಿ ದೂರವಾಣಿ ಕರೆ ಮಾಡಿ ನನ್ನ ಕಚೇರಿಗೆ ಬರುವಂತೆ ಕೇಳಿದ್ದೆ ಎನ್ನುವುದು ಸರಿಯಲ್ಲಾ. ನನ್ನ ಜವಾಬ ಬೆಸ್ಮಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ ಅಂತಾ ತಿಳಿಸಿದೆವು ಹಾಗೂ ಮಾನ್ಯ ಉಚ್ಚ ನ್ಯಾಯಾಲಯ ದಿಂದ ಆದೇಶ

ಬರುವವರೆಗೂ ಯಾವುದೇ ಕಾರ್ಯ ಪೂರೈಸಬಾರದು ಅಂತಾ ವಾದಿ ಹಾಗೂ ಪ್ರತಿವಾದಿಯರು ತಿಳಿಸಿದ್ದರಿಂದ ಅಳತೆ ಕಾರ್ಯ ಮಾಡದೇ ಪರತ ಹೋಗಲಾಯಿತು ಎಂದು ಕಾಣಿಸಲಾಗಿದೆ ಎಂದರೆ ನಿಜ. ನನ್ನ ದಿಃ 09-08-2023 ರ ಜವಾಬ ಬೇಸ್ಮಿಯಲ್ಲಿ ಕಾಣಿಸಿದಂತೆ ಪ್ರತಿವಾದಿ ನಂ. 1,2,4 ಮತ್ತು 5 ಇವರು ಅಳತೆ ಕಾರ್ಯಕ್ಕೆ ತಕರಾರು ಪಡಿಸಿದ್ದರಿಂದ ಆ ದಿನ ನಾನು ದಾವಾ ಆಸ್ತಿಗಳ ಪ್ರತ್ಯೇಕ್ಷ ಅಳತೆ ಕಾರ್ಯ ಕೈಗೊಳ್ಳದೇ ಗ್ರಾಮದ ಚವಡಿಯಲ್ಲಿ ಕುಳಿತು ಕೇವಲ ವಾದಿಯರ  ಸಹಿ ಮಾತ್ರ ಪಡೆದು ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲಾ. ಎರಡೂ ಜವಾಬ ಬೇಸ್ಮಿಗಳಿಗೆ 1 ನೇ ಪ್ರತಿವಾದಿಯ ಸಹಿ ಇರುವುದಿಲ್ಲಾ ಎಂದರೆ ನಿಜ. ನನಗೆ ಯಾವ ಪ್ರಕರಣದಲ್ಲಿಯ ಡಿಕ್ರಿಯನ್ನು ನೋಡಿ ಅಳತೆ ಕಾರ್ಯ ಕೈಗೊಂಡಿರುತ್ತೇನೆ ಎಂದು ಹೇಳಲು ಬರುವುದಿಲ್ಲಾ. ನಾನು ಪ್ರಾಥಮಿಕ ಡಿಕ್ರಿ ಪ್ರಕಾರ ಅಳತೆ ಕಾರ್ಯವನ್ನು ಕೈಗೊಳ್ಳದೇ ಕೇವಲ ವಾದಿಯರಿಗೆ ಅನೂಕೂಲವಾಗುವಂತೆ ಕಮೀಷನರ ವರದಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲಾ. ನಾನು ದಾವಾ ಜಮೀನುಗಳಿಗೆ ಭೇಟಿ ನೀಡಿ ಅಳತೆ ಕಾರ್ಯ ಮಾಡಿ ಖಚ್ಚಾ ನಕಾಶೆಯನ್ನು ತಯಾರಿಸಿಕೊಂಡು ಬಂದು ನನ್ನ ಕಚೇರಿಯಲ್ಲಿ ನಿಶಾನೆ ಸಿ 1 ರಂತೆ ಸಂಪೂರ್ಣ ವರದಿಯನ್ನು ನಕಾಶೆಯೊಂದಿಗೆ ತಯಾರಿಸಿರುತ್ತೇನೆ. ನಾನು ತಯಾರಿಸಿದ ನಕಾಶೆಯಂತೆ ದಾವಾ ಆಸ್ತಿ ಇರುವುದಿಲ್ಲಾ ಎನ್ನುವುದು ಸರಿಯಲ್ಲಾ. ಡಿಕ್ರಿ ಪ್ರಕಾರ ವಾದಿಯರಿಗೆ ಮತ್ತು 1 ಹಾಗೂ 2 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ 1/10 ಹಿಸ್ಸೆ ಇದ್ದು ನಾನು ನನ್ನ ನಕಾಶೆಯಲ್ಲಿ 1/2 ಭಾಗ ಎಂದು ತೋರಿಸಿದ್ದೇನೆ ಎಂದರೆ ಸಾಕ್ಷಿಯು ನಾನು ಡಿಕ್ರಿಯ ಪ್ರಕಾರವೇ ನಕಾಶೆಯನ್ನು ತಯಾರಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಡಿಕ್ರಿಯನ್ನು ನೋಡದೇ ಕೇವಲ ವಾದಿಯರು ಹೇಳಿದಂತೆ ನಕಾಶೆ

ತಯಾರಿಸಿರುತ್ತೇನೆ ಎನ್ನುವುದು ಸರಿಯಲ್ಲಾ. ನಾನು ನನ್ನ ವರದಿಯಲ್ಲಿ ವಾದಿಯರಿಗೆ ಶ್ರೇಷ್ಟ ಜಮೀನನ್ನು ಕಾಣಿಸಿ ಪ್ರತಿವಾದಿಯರಿಗೆ ಕನಿಷ್ಟ ಮಟ್ಟದ ಜಮೀನನ್ನು ಕಾಣಿಸಿದ್ದೇನೆ ಎನ್ನುವುದು ಸರಿಯಲ್ಲಾ. ಪ್ರತಿವಾದಿಯರನ್ನು ಹಾಜರುಪಡಿಸಿಕೊಳ್ಳದೇ ವಾದಿಯ ಮಾತು ಕೇಳಿ ಸುಳ್ಳು ವರದಿ ತಯಾರಿಸಿ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲಾ. ನಾನು ಜವಾಬ ಬೇಸ್ಮಿಗೆ ಊರಿನ 5 ಜನ ಸಾಕ್ಷಿದಾರರ ಸಹಿ ಪಡೆದಿಲ್ಲಾ ಆದರೆ ಸ್ಥಳದಲ್ಲಿ ಹಾಜರಿದ್ದ ಒಬ್ಬ ಸಾಕ್ಷಿದಾರನ ಸಹಿ ಪಡೆದಿದ್ದೇನೆ. ಸದರೀ ಸಾಕ್ಷಿದಾರ ಬಸವರಾಜ ಸಣ್ಣಾರ ಇತನು ವಾದಿಯರ ಸಂಬಂದಿಕ ಎಂದರೆ ನನಗೆ ಗೊತ್ತಿಲ್ಲಾ.

ಅಳತೆ ಕಾರ್ಯ ಮಾಡಿದ ಬಗ್ಗೆ ನಾನು ಬಾಂದುಕಲ್ಲುಗಳನ್ನು ನಿಲ್ಲಿಸಿರುವುದಿಲ್ಲಾ ಏಕೆಂದರೆ ಅಳತೆ ಕಾರ್ಯಕ್ಕೆ ಪ್ರತಿವಾದಿಯರು ತಕರಾರು ಮಾಡಿದ್ದರಿಂದ ನಾನು ಬಾಂದು ಕಲ್ಲುಗಳನ್ನು ನಿಲ್ಲಿಸಿರುವುದಿಲ್ಲಾ.

3 ನೇ ಪ್ರತಿವಾದಿ ಶಂಕರವ್ವ ಗೌಡಣ್ಣನವರ ಅಳತೆ ಕಾರ್ಯಕ್ಕೆ ತಕರಾರು ಮಾಡಿರುತ್ತಾರೆ. ನಾನು ಪ್ರತಿವಾದಿಯರಿಗೆ ನೋಟಿಸು ನೀಡದೇ ದಾವಾ ಆಸ್ತಿಗಳಿಗೆ ಭೇಟಿ ನೀಡಿ ಅಳತೆ ಕಾರ್ಯ ಮಾಡದೇ ನನ್ನ ಕಚೇರಿಯಲ್ಲಿ ಕುಳಿತು ವಾದಿಯರಿಗೆ ಅನೂಕೂಲವಾಗುವಂತೆ ಸುಳ್ಳು ವರದಿ ವ ನಕಾಶೆ ತಯಾರಿಸಿ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲಾ. ನನ್ನ ವರದಿಯಂತೆ ಪ್ರತಿವಾದಿಯರಿಗೆ ಹಾನಿ ಉಂಟಾಗುತ್ತದೆ ಎನ್ನುವುದು ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

**FDP** 50/2022

**ಸಿ ಡಬ್ಲ್ಯೂ 1**

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ